(ii) ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಪೈಕಿ ಸುದಗಟ್ಟಿ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ಪ್ರಾರಂಭಿಸುವ ಬಗ್ಗೆ.

ಶ್ರೀ ಎಸ್. ಹೆಚ್. ಕೌಜಲಗಿ.— ಮಾನ್ಯ ಅಧ್ಯಕ್ಷರೆ ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಪೈಕಿ "ಸುದಗಟ್ಟಿ" ಗ್ರಾಮವು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆ ಆದ ಪುನರ್‌ವಸತಿ ಗ್ರಾಮವಿದ್ದು, ಇಲ್ಲಿ ಸರ್ಕಾರಿ ಪ್ರೌಢಶಾಲೆ ಪ್ರಾರಂಭಿಸುವುದು ಅತೀ ಆವಶ್ಯವಿದೆ. ಆದಕಾರಣ ಇಲ್ಲಿ ಸರ್ಕಾರಿ ಪ್ರೌಢಶಾಲೆ ಪ್ರಾರಂಭಿಸಬೇಕು ಎಂದು ಮಾನ್ಯ ವಿದ್ಯಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ವಿದ್ಯಾ ಸಚಿವರು).— ಮಾನ್ಯ ಸದಸ್ಯರು ಈಗ ಪ್ರಸ್ತಾಪ ಮಾಡಿದ್ದಾರೆ, ಕ್ರಮ ತೆಗೆದುಕೊಳ್ಳುತ್ತೇನೆ.

(ಜ) ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಆದ ಅನ್ಯಾಯದ ಬಗ್ಗೆ

ಡಾ॥ ಎಲ್. ಮಲಕರೆಡ್ಡಿ.—ಮಾನ್ಯ ಅಧ್ಯಕ್ಷರೇ ಕಳೆದ ೨ ವಾರದಿಂದ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಆದ ಅನ್ಯಾಯದ ಬಗ್ಗೆ ಬಹಳ ಕಳವಳಕರವಾದ ವಾತಾವರಣ ನಿರ್ಮಾಣವಾಗಿದೆ. ಕಾರಣ ಸ್ನಾತಕೋತ್ತರ ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬೇರೆ ಬೇರೆ ವಿಷಯಗಳಿಗೆ ಸೆಲೆಕ್ಟ್ ಆದ ವಿದ್ಯಾರ್ಥಿಗಳ ಪಟ್ಟಿಯನ್ನು ಕೇವಲ ವೈದ್ಯಕೀಯ ನಿರ್ದೇಶನಾಲಯದ ಕಛೇರಿಯಲ್ಲೇ ದಿನಾಂಕ ೨೪–೫–೯೦ ರಂದು ನೋಟೀಸ್ ಬೋರ್ಡ್ ಮೇಲೆ ಮತ್ತು ಸಂಬಂಧಪಟ್ಟ ಮೆಡಿಕಲ್ ಕಾಲೇಜ್ ನೋಟೀಸ್ ಬೋರ್ಡಿನ ಮೇಲೆ ಲಗತ್ತಿಸಲಾಯಿತು, ಹೀಗಾಗಿ ಹಳ್ಳಿಯಲ್ಲಿ ಮತ್ತು ಇತರ ನಗರ ಪಟ್ಟಣಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಇದರ ಬಗ್ಗೆ ಸೂಚನೆಯೇ ಸಿಗಲಾರದಾಯಿತು. ಪ್ರವೇಶ ಪಡೆಯುವ ಕೊನೆಯ ದಿನಾಂಕ ೩೦–೫–೯೦ ಇದರಿಂದ ನೂರಾರು ವಿದ್ಯಾರ್ಥಿಗಳಿಗೆ ಉತ್ತೀರ್ಣರಾದರೂ ಕೂಡ ಪ್ರವೇಶ ದೊರೆಯದೇ ಹೋಗಿದೆ. ಇದರಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ತುಂಬಲಾರದ ನಷ್ಟ ಮತ್ತು ಅನ್ಯಾಯವಾಗಿದೆ. ಆದ್ದರಿಂದ ದಯವಾಡಿ ಈ ವಿಷಯವನ್ನು ವಿಧಾನ ಸಭೆಯಲ್ಲಿ ತುರ್ತಾಗಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀಮತಿ ಮನೋರಮ ಮಾಧ್ವರಾಜ್.— ಮಾನ್ಯ ಅಧ್ಯಕ್ಷರೆ, ೬ ನೇ ಪಟ್ಟಿಯಲ್ಲಾದ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ ಪಟ್ಟಿಯನ್ನು ಸ್ನಾತಕೋತ್ತರ ಶಿಕ್ಷಣ ಕೊಡುವ ಎಲ್ಲಾ ವೈದ್ಯಕೀಯ ಕಾಲೇಜುಗಳ ಮತ್ತು ಬೆಂಗಳೂರು ವೈದ್ಯಕೀಯ ನಿರ್ದೇಶನಾಲಯದ ನೋಟೀಸ್ ಬೋರ್ಡಿನಲ್ಲಿ ಹಾಕಿ, ತಾ. ೨೫–೫–೯೦ ರಿಂದ ೩೦–೫–೯೦ ರ ವರೆಗೆ ಕಾಲೇಜುಗಳಲ್ಲಿ ಆಡ್ಮಿಷನ್ ಆಗುತ್ತದೆಂದು ಎಲ್ಲಾ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಿದ್ದೇವೆ. ಸೆಲೆಕ್ಟ್ ಆದ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ತಿಳಿಸುವ ಪರಿಪಾಠ ಇಲ್ಲ. ಆದನ್ನು ಈಗ ಚಾಲ್ತಿಯಲ್ಲಿ ತರಲಾಯೋಚಿಸಲಾಗುತ್ತದೆ. ಹಾಗೂ ಕೆಲವು ವಿದ್ಯಾರ್ಥಿಗಳು ತೊಂದರೆಯನ್ನು ವ್ಯಕ್ತಪಡಿಸುವುದರಿಂದ ಅವರಿಗೆ ಅಂದರೆ ೧೨ ಜನರಿಗೆ ತಾ. ೬–೬–೯೦ ರವರೆಗೆ ಅವಧಿಯನ್ನು ವಿಸ್ತರಿಸಿದ್ದೇವೆ.

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಬಂಟ್ವಾಳ ತಾಲ್ಲೂಕಿನಲ್ಲಿ ಮಂಗಳೂರಿನಿಂದ ಬಿ. ಸಿ. ರೋಡು ಮೂಲಕ ಧರ್ಮಸ್ಥಳಕ್ಕೆ ಹೋಗುವ ರಸ್ತೆಯ ಮಧ್ಯ ಭಾಗದಲ್ಲಿ ಕಾರಿಂಜೇಶ್ವರ ಎಂಬ ಸುಂದರವಾದ ಸ್ಥಳವಿದ್ದು, ಅಲ್ಲಿ ಪಾರ್ವತಿ ಪರಮೇಶ್ವರ ದೇವಸ್ಥಾನವಿದೆ. ನೈಸರ್ಗಿಕ ಸೌಂದರ್ಯದ ಪ್ರದೇಶವಾಗಿದ್ದು, ಪ್ರವಾಸೋದ್ಯಮ ಇಲಾಖೆಯಿಂದ ಈ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಯೋಗ್ಯ ಸ್ಥಳವಾಗಿರುತ್ತದೆ. ಆದುದರಿಂದ ಈ ಪ್ರದೇಶವನ್ನು ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿಪಡಿಸಬೇಕಾಗಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಮಂಗಳೂರು ತಾಲ್ಲೂಕಿನ ನಲ್ಲಿ ತೀರ್ಥವೆಂಬ ಪ್ರಕೃತಿಯ ಸುಂದರತಾಣವಾಗಿದ್ದು, ಇದನ್ನು ಕೂಡ ಪ್ರವಾಸೋದ್ಯಮ ಇಲಾಖೆ ಅಭಿವೃದ್ಧಿಪಡಿಸುವಲ್ಲಿ ಕೂಡಲೇ ಕಾರ್ಯಪ್ರವೃತ್ತವಾಗಬೇಕೆಂದು ಬೇಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—(ಕಾನೂನು, ಸಂಸದೀಯ ಯೋಜನೆ ಮತ್ತು ಪ್ರವಾಸೋದ್ಯಮ ಸಚಿವರು) ಮಾನ್ಯ ಅಧ್ಯಕ್ಷರೇ, ಮಂಗಳೂರಿನಿಂದ ಧರ್ಮಸ್ಥಳಕ್ಕೆ ಹೋಗುವ ಬಿ.ಸಿ. ರೋಡಿನ ಮಧ್ಯದಲ್ಲಿ ಸುಮಾರು ೪೨ ಕಿ.ಮೀ. ದೂರದಲ್ಲಿ ಕಾರಿಂಜೇಶ್ವರ ದೇವಸ್ಥಾನವು ಇರುತ್ತದೆ. ಈ ಬೆಟ್ಟದ ತಪ್ಪಲಿನಲ್ಲಿ ಒಂದು ಸರೋವರವೂ ಇರುತ್ತದೆ. ಬೆಟ್ಟದ ಮೇಲ್ಭಾಗದಲ್ಲಿ ಈಶ್ವರ ಮತ್ತು ಪಾರ್ವತಿ ದೇವಸ್ಥಾನವು ಇದ್ದು ಈ ಪ್ರದೇಶವೂ ಕಾಡುಗಳ ಮತ್ತು ಬೆಟ್ಟಗಳ ರಮಣೀಯ ದೃಶ್ಯದಿಂದ ಕೂಡಿರುತ್ತದೆ. ಪ್ರತಿವರ್ಷವೂ ಸಾಮಾನ್ಯವಾಗಿ ಏಪ್ರಿಲ್ ಮಾಹೆಯಲ್ಲಿ ಇಲ್ಲಿ ಜಾತ್ರೆಯೂ ಕೂಡ ನಡೆಯುತ್ತದೆ.

ದೇವಸ್ಥಾನದ ಸಮಿತಿಯವರಿಂದ ಅಡಿಗೆ ಕೋಣೆ ಮತ್ತು ಡಾರ್ಮಿಟರಿ ವಸತಿಯನ್ನು ಒದಗಿಸಲಾಗಿದೆ. ಯಾತ್ರಾರ್ಥಿಗಳ ಜರೂರು ಅವಶ್ಯಕತೆಗಳಿಗಾಗಿ ಇಲಾಖೆಯು ಸುಮಾರು ರೂ. ೨೪,೫೦-೦೦ (ಇಪ್ಪತ್ನಾಲ್ಕು ಸಾವಿರದ ಐದು ನೂರಂ ರೂಪಾಯಿಗಳು ಮಾತ್ರ) ರೂ.ಗಳ ಅಂದಾಜಿನಿಂದ ಕೆಳಗಿನ ಸೌಲಭ್ಯಗಳನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಅ) ಬಿಸಿಲು ನೆರಳು ಕೊಡೆಗಳು

ಆ) ಕುಳಿತುಕೊಳ್ಳುವ ಆಸನಗಳು

ಇ) ಬಂಡೆಯ ಅಂಚಿನಲ್ಲಿ ಕಬ್ಬಿಣದ ಸರಳುಗಳ ಬೇಡು.

ಇದೇ ರೀತಿಯಲ್ಲಿ ನೆಲ್ಲಿ ತೀರ್ಥವು ಮಂಗಳೂರಿನಿಂದ ೨೫ ಕಿ. ಮೀ ದೂರದಲ್ಲಿ ಇರುತ್ತದೆ. ಮತ್ತು ಸೋಮನಾಥ ದೇವಾಲಯಕ್ಕಾಗಿ ಈ ಸ್ಥಳವು ಪ್ರಸಿದ್ಧಿಯಾಗಿದೆ. ಈ ದೇವಸ್ಥಾನವು ನೆಲದೊಳಗೆ ಇದ್ದು, ದೇವರ ದರ್ಶನವನ್ನು ಪಡೆಯಲು ಯಾತ್ರಾರ್ಥಿಗಳು ಗುಹೆಯ ಒಳಗೆ ನಡೆದೂ ಹೋಗಬೇಕು. ಈ ಪ್ರದೇಶವು ಪ್ರಪ್ರಥಮವಾಗಿ ಯಾತ್ರಾ ಸ್ಥಳವಾದ್ದರಿಂದ ಈ ಪ್ರದೇಶಕ್ಕೆ ಸಂಚಾರವು ಸಾಂದರ್ಭಿಕ ಕಾಲದಲ್ಲಿ ಮಾತ್ರ ಇರುತ್ತದೆ.

ಈ ಪ್ರದೇಶವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಸುಮಾರು ೨ ಎಕರೆ ಜಮೀನನ್ನು ಇಲಾಖೆಯು ವಶಪಡಿಸಿಕೊಂಡಿದೆ.

ಆಯವ್ಯಯ ಪಟ್ಟಿಯಲ್ಲಿ ಕಳೆದ ೪-೫ ವರ್ಷಗಳಿಂದ ರಾಜ್ಯದ ಹಣಕಾಸಿನ ಕೊರತೆಯ ಹಿನ್ನೆಲೆಯಲ್ಲಿ ಇಲಾಖೆಯು ಈಗ ಕೈಗೊಂಡಿರುವ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಮಾತ್ರ ಹಣವನ್ನು ಒದಗಿಸಲಾಗಿದೆ. ಆದಕಾರಣ ಹೊಸ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೂ ಅತಿ ಅವಶ್ಯಕವಾಗಿರುವ ಸೌಲಭ್ಯಗಳನ್ನು ಇಂತಹ ಪ್ರದೇಶದಲ್ಲಿ ಒದಗಿಸಲು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಮುಂಬರುವ ದಿವಸಗಳಲ್ಲಿ ಕಟ್ಟಿಡ ಮತ್ತಿತರ ಅಭಿವೃದ್ಧಿ ಕಾರ್ಯಕ್ರಮ ಶೀರ್ಷಿಕೆಯಲ್ಲಿ ಸಾಕಷ್ಟು ಹಣವು ಒದಗಿಸಿದಾಗ ಈ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ಪ್ರಯತ್ನ ಮಾಡಲಾಗುವುದು.

(7) ನಗರದ ವಿಲ್ಸನ್ ಗಾರ್ಡನ್ ಪೋಲೀಸ್ ಸ್ಟೇಷನ್ನಿನಲ್ಲಿ ನೂರ್ ಅಹಮದ್ ಎಂಬುವರ ಫಿರ್ಯಾದಿ ತೆಗೆದುಕೊಳ್ಳಲು ನಿರಾಕರಿಸಿದ ಪೋಲೀಸ್ ಅಧಿಕಾರಿಯ ಮೇಲೆ ಕ್ರಮ ಜರುಗಿಸಲು ಒತ್ತಾಯ.

SRI QAMARUL ISLAM (Gulbarga).—On 9th June, 1990 in Wilson Garden area Bangalore, there was a quarrel, between the children of Sri Noor Ahmed and Sri Ayub, both are neighbourers. About 7.00 P.M., mother of Noor Ahmed went to the Wilson Garden Police Station, to lodge a complaint. The Police Authorities of the said Police Station refused to take her complaint and abused her. Then, her. son Noor Ahmed went to the Police Station at about 10.00 P.M to enquire as to why the Sub Inspector has refused to take complaint. The Sub Inspector and the other Constables started abusing Noor Ahmed and his friend as "you are Pakistani Badmash" and they have been kept under police custody up to 11-30 late in the night. They have got serious injuries on the head and on the back. When a tense situation was created they were released from the Police custody. These two Persons went the Victoria Hospital for the treatment.

Next day, complaint was given to the Police Commissioner, explaining the ill-treatment and the bad abusing by the Sub Inspector and other Constables in the Wilson Garden Police Station